# B.L.D.E. ASSOCIATION'S

# S.B.ARTS AND K.C.P. SCIENCE COLLEGE. VIJAPUR

## DEPARTMENT OF KANNADA

## ADVANCE LEARNER - B.A. I$^{st}$ SEMISTER 2017-18

Principal,
S. B. Arts & KCP Sc. College.
Bijapur

IQAC, Co-ordinator
S.B.Arts & K.C.P.Science College
Vijayapur.

ಮುಖ್ಯಸ್ಥರು,
ಕನ್ನಡ ವಿಭಾಗ,
ಎಸ್. ಬಿ. ಕಲಾ ಮತ್ತು ಕೆ. ಸಿ. ಪಿ.
ವಿಜ್ಞಾನ ಮಹಾವಿದ್ಯಾಲಯ, ವಿಜಾಪುರ

Scanned with CamScanner

# Topic Of the Assignment / Project work/Seminar

## 2017-18 B.A I[st] Semister

| SL.NO. | NAME OF THE STUDENT | ROLL.No. | Topic Of the Assignment /Project work /Seminar. |
|---|---|---|---|
| 1) | AMBANNA. MANEGAR | 2 | Bendre avara KavanagaLu |
| 2) | ASHOK. MATHPATI | 81 | Akkamahadevi avara jeevana mattu vacanagau |
| 3) | BASAVARAJ. CHANDAKAVATE | 16 | Basavanna mattu Dharmika ChitanegaLu |
| 4) | BHAGYSHREE. CHANDAKAVATE | 126 | Pampa kavi mattu kaavyagaLu |
| 5) | PUSHAPA. BHANDARAKOTI | 144 | Arakeri graamada saanskrutik Paramapare |
| 6) | REVANASIDDH. PUJARI | 91 | Sarvajnyan VacahanagaLu |

Principal,
S. B. Arts & KCP Sc. College,
Bijapur

IQAC, Co-ordinator
S.B.Arts & K.C.P.Science College,
Vijayapur.

Scanned with CamScanner

ಅಶೋಕ. ಬಸವರಾಜ. ಬಾಂದಿಕವಡಿ.
ಕ್ರ.ನಂ - 16
ವರ್ಗ - ಬಿ.ಎ. I st

## ಬಸವಣ್ಣನವರು ಮತ್ತು ಧಾರ್ಮಿಕ ಚಿಂತನೆಗಳು

ಬಸವಣ್ಣನವರು ಕ್ರಿ.ಶ 12 ಶತಮಾನದ ಶ್ರೇಷ್ಠ ವಚನಕಾರ ಇವರು 1134 ರಲ್ಲಿ ವಿಜಾಪುರ ಜಿಲ್ಲೆಯಲ್ಲಿರುವ ಬಸವನ ಬಾಗೇವಾಡಿಯಲ್ಲಿ ಜನಿಸಿದ್ದಾರೆ. ಬಸವಣ್ಣನವರು ಹುಟ್ಟಿದ್ದರಿಂದ ಈ ಊರು ಬಸವನ ಬಾಗೇವಾಡಿಯೆಂದು ಪ್ರಸಿದ್ಧವಾಗಿದೆ. [ಬಸವಣ್ಣನವರ ತಾಯಿಯ ತವರುಮನೆಯಾದ ಇಂಗಳೇಶ್ವರ ಗ್ರಾಮದಲ್ಲಿ ಜನಿಸಿದರು ಎಂದು ಪ್ರತೀತಿ ಇದೆ.] ಬಸವಣ್ಣನವರ ತಂದೆ ಮಾದರಸ ತಾಯಿ ಮಾದಲಾಂಬಿಕೆ. ಇವರ ಗುರುಗಳು ಜಾತವೇದ ಮುನಿಗಳು. ಬಸವಣ್ಣನವರು ಚಿಕ್ಕಂದಿನಿಂದಲೂ ವೈದಿಕ ಸಂಸ್ಕೃತಿಯ ಕರ್ಮಾಚರಣೆಗಳನ್ನು ವಿರೋಧಿಸುತ್ತಿದ್ದರು, ಇವರು ಅಕ್ಕನಾಗಮ್ಮ & ಬಾಲಶಿವಸ್ವಾಮಿಯ ಜೊತೆಯಲ್ಲಿ ಬಾಲ್ಯವನ್ನು ಕಳೆದರು, ಇವರು ಸಂಪ್ರದಾಯದಂತೆ 8ನೇ ವಯಸ್ಸಿನಲ್ಲಿ ಬಸವಣ್ಣನವರಿಗೆ ಜನಿವಾರ ಹಾಕಲು ಬಂದಾಗ ಬಸವಣ್ಣನವರು ತನಗಿಂತ ಹಿರಿಯಳಾದ ತನ್ನ ಅಕ್ಕನಾಗಮ್ಮನಿಗೆ ಕೊಡಲು ಕೇಳುತ್ತಾರೆ. ಆಗ ಕೆಲವರು ಅಕ್ಕನಾಗಮ್ಮನಿಗೆ ಕೊಡಲು ಬರುವುದಿಲ್ಲ ಇದು ಕೇವಲ ಪುರುಷರಿಗೆ ಮಾತ್ರ ಎಂದು ನುಡಿದಾಗ ಬಸವಣ್ಣನವರು ಅಸಮಾನತೆಯನ್ನು ವಿರೋಧಿಸಿ ಮನೆಯಿಂದ ನಿರ್ಗಮಿಸಿ ಕೂಡಲ ಸಂಗಮಕ್ಕೆ ಹೊರಡುತ್ತಾರೆ.

ಮುಖ್ಯಸ್ಥರು,
ಕನ್ನಡ ವಿಭಾಗ,
ಎಸ್. ಬಿ. ಕಲಾ ಮತ್ತು ಕೆ. ಸಿ. ಪಿ.
ವಿಜ್ಞಾನ ಮಹಾವಿದ್ಯಾಲಯ, ವಿಜಾಪುರ

IQAC, Co-ordinator
S.B.Arts & K.C.P.Science College,
Vijayapur.

Principal,
S.B. Arts and KCP Science College
VIJAYAPUR

Scanned with CamScanner

ಬಸವಣ್ಣನವರು 12 ನೇ ಶತಕದ ಕಾಲ ಮೊದಲನೆಯದಲ್ಲಿ ಹಿಂದೂ ದೇವಸ್ಥಾನದಲ್ಲಿ ಅಧ್ಯಯನ ಮಾಡಿದ್ದರು. ಇವರು ತಮ್ಮ ಬಾಲ್ಯದ ಕಾಲದಿಂದ ಸೋದರ ಸಂಬಂಧಿಯನ್ನು ಮದುವೆಯಾದರು. ಇವರ ಪತ್ನಿ ಗಂಗಾಂಬಿಕೆ. ಕಲಚುರಿ ರಾಜ ಬಿಜ್ಜಳ ಪ್ರಧಾನಮಂತ್ರಿಯ ಮಗಳು. ನಂತರ ಬಸವಣ್ಣನವರೇ ಬಿಜ್ಜಳ ಆಸ್ಥಾನದ ಮಂತ್ರಿಯಾದರು ಮತ್ತು ಇವರು ಸಾಮಾಜಿಕ ಸುಧಾರಕ. ಬಸವಣ್ಣನವರ ವಚನಗಳ ಮೂಲಕ ಸಾಮಾಜಿಕ ಅರಿವು ಹರಡಿಸುವುದು. ಸಾಮಾಜಿಕ ತಾರತಮ್ಯ. ಅಸಮಾನತೆ, ಲಿಂಗ ಭೇದ ಭಾವಗಳ ವಿರುದ್ಧ ಹೋರಾಡಿದ್ದವರಲ್ಲಿ ಬಸವಣ್ಣನವರು ಪ್ರಮುಖರಾಗಿರುತ್ತಾರೆ. ಆದುದರಿಂದ ಇವರನ್ನು ವಿಶ್ವಗುರು ಎಂದು ಕರೆದಿದ್ದಾರೆ.

ಬಸವಣ್ಣನವರು ಇಷ್ಟಲಿಂಗ ಧಾರಣವನ್ನು ಪರಿಚಯಿಸಿದ್ದರು. ತನ್ನ ಸಾಮ್ರಾಜ್ಯದ ಮುಖ್ಯಮಂತ್ರಿಯಾಗಿ ಇವರು ಅನುಭವ ಮಂಟಪವನ್ನು ಸ್ಥಾಪಿಸಿದ್ದರು. ಅನುಭವ ಮಂಟಪದಲ್ಲಿ ಎಲ್ಲಾ ಸಾಮಾಜಿಕ, ಧಾರ್ಮಿಕವಾಗಿ ಪುರುಷ ಮತ್ತು ಮಹಿಳೆಯರು ಯಾವುದೇ ಭೇದಭಾವವಿಲ್ಲದೆ ವಿಷಯಗಳ ಕುರಿತು ಚರ್ಚಿಸುತ್ತಿದ್ದರು. ಬಸವಣ್ಣನವರಿಗೆ ಜಗಜ್ಯೋತಿ ಬಸವಣ್ಣ. ಕ್ರಾಂತಿಯೋಗಿ ಬಸವಣ್ಣ, ಭಕ್ತಿಭಂಡಾರಿ. ಮಹಾಮಾನವತಾವಾದಿ ಎಂದು ಬಿರುದುಗಳನ್ನು ತಮ್ಮ ಚಿಕ್ಕ ವಯಸ್ಸಿನಲ್ಲಿಯೇ ಪಡೆದುಕೊಂಡ ಕೀರ್ತಿ ಬಸವಣ್ಣನವರದ್ದು.

ಬಸವಣ್ಣನವರು 12 ವರ್ಷಗಳ ಕಾಲ ಕೂಡಲಸಂಗಮದಲ್ಲಿ ಅಧ್ಯಯನ ಮಾಡುತ್ತಾ ಕಳೆದರು. ಅವರ ಪ್ರಪಂಚದಲ್ಲಿ ದೇವನು ಒಬ್ಬ ಮತ್ತು ಅವನು ಮಾನವರಲ್ಲಿಯೇ ಇದ್ದಾನೆ. ಕಾರಣ ಗುಡಿ- ಗುಂಡಾರಗಳಲ್ಲಲ್ಲ, ಕೆಲಸ ಮಾಡಿ ದೇವನ ಸೇವಿಸಬೇಕು ಆಲಸಿ ದೇವನ ಸಲ್ಲ, ಸುಳ್ಳು ಹೇಳುವುದು. ವಂಚಿಸುವುದು, ಕೊಲೆ, ಸುಲಿಗೆ ಮಾಡುವುದು. ಪ್ರಾಣಿಬಲಿ ನೀಡುವುದು. ಪರಧನ ಹರಣಮಾಡುವುದು ಮಹಾ ಅಪರಾಧವೆಂದು ಹೇಳಿದ್ದಾರೆ. ಕೆಲಸದಲ್ಲಿ ಮೇಲು - ಕೀಳು ಎಂಬುದಿಲ್ಲ. ಪುರುಷನಂತೆ ಮಹಿಳೆಗೂ ಅಧ್ಯಾಪನದ ಮತ್ತು ಜೀವನರೂಪಿಸಿಕೊಳ್ಳುವ ಹಕ್ಕಿದೆ. ಹೀಗೆ ಸಮಾನತೆ., ಕಾಯಕ, ದಾಸೋಹ ತತ್ತ್ವಗಳನ್ನು ಸ್ವೀಕರಿಸುವ ಮತ್ತು ಆಚರಿಸುವ ಯಾರು ಬೇಕಾದರು ಶಿವಶರಣರಾಗಬಹುದುಎಂದು ಸಾರಿದ್ದಾರೆ. ನಿರಂತರ ಬಂಧನಕ್ಕೊಳಗಾಗುತ್ತಿದ್ದ ಜನರಿಗೆ ನ್ಯಾಯ ನೀಡಿದ್ದರು.

ಬಸವಣ್ಣನವರ ಪ್ರೇರಣೆಯಿಂದ್ದ ಚಿಂತನ ಮತ್ತು ಪ್ರಶ್ನೋತ್ತರಗಳ ನಡುವೆ ನಡೆದ ಸಮಾಲೋಚನೆಯ ಬದಲಾದ ಕಲ್ಯಾಣ ಕ್ರಾಂತಿಗೆ ಮುನ್ನುಡಿಯಾಯಿತು. ಇವರು ಮಂತ್ರಗೋಪ್ಯ, ಷಟ್ಸ್ಥಲ ವಚನ ಎಂಬ ಗ್ರಂಥಗಳನ್ನು ಬರೆದಿದ್ದಾರೆ. ಇವರನ್ನು ಕುರಿತಂತೆ ಕನ್ನಡ, ತೆಲುಗು. ಮರಾಠಿ ಹಲವಾರು ಭಾಷೆಗಳಲ್ಲಿ ಇವರ ಪುರಾಣಗಳು ರಚನೆಯಾಗಿವೆ.

Scanned with CamScanner

ಬೆಳಗಾವಿ ಜಿಲ್ಲೆಯ ಇಂಗಳೇಶ್ವರದ ಶಿವಾಲಯ-ದಲ್ಲಿ ಒಲ್ಲೆಯಾಗಿರುವ ಸಂಗಮೇಶನ ಒಂದು ಹೆಸರು ವಚನದಲ್ಲಿ ಬಸವಣ್ಣನವರದ್ದೇ. ಎಂದು ಅಂದ್ಯಾಸರು ನುಡಿದ್ದಾರೆ. ಹೀಗೆ ವಚನಕಾರ ಶ್ರೀ ಸಮಾಜಸುಧಾರಕರಾದ ಬಸವಣ್ಣನವರು ಧಾರ್ಮಿಕವಾಗಿ ಹಲವಾರು ಸುಧಾರಣೆಗಳನ್ನು ಮಾಡಿದ್ದಾರೆ. ಬಸವಣ್ಣನವರಿಗೆ ಒಂದು ದಿನ ಪರಮಾತ್ಮನ ದಿವ್ಯ ದರ್ಶನವಾಯಿತು, ಅನುಗ್ರಹಿತರಾದರು. ಬ್ರಹ್ಮ, ವಿಷ್ಣು, ಮಹೇಶ್ವರರೆಂಬ ತ್ರಿಮೂರ್ತಿಗಳನ್ನು ಒಂದೇ ಸ್ವರೂಪರೆ-ನೆಂದು ಪರಿಗಣಿಸಿ ಆ ದೇವರನ್ನು ಲಿಂಗ ದೇವರೆಂದು ಕರೆದರು. ನಿರಾಕಾರ ದೇವರಿಗೆ ಮನುಷ್ಯರ, ಪ್ರಾಣಿಗಳ, ಆಕಾರವನ್ನು ಕೊಡುವುದು ಸರಿಯಲ್ಲ. ಒಂದು ಭಾವ ತಕ್ಕದು ದೇವನ ನಿಜದ ಕೃತಿಯೇ ಬ್ರಹ್ಮಾಂಡ, ಇದು ಗೋಚರಕಾರವಲ್ಲದ್ದು ಎಂದು ಹೇಳಿದ್ದಾರೆ.

ಧರ್ಮಪೀಠಿಕರು ಶಕ್ತಿಸ್ವೀಕರಿಸಿ ಕಲ್ಯಾಣದಿಂದ ಹೊರಟ ನಂತರ ಹರಳಯ್ಯ, ಮಧುವರಸ, ಶೀಲವಂತರ ಬಂಧನವಾಗಿ ಅವರು ವರ್ಣಾಂತರ ವಿವಾಹದಲ್ಲಿ ಭಾಗಿಯಾದ್ದ-ಕ್ಕಾಗಿ ಕಣ್ಣುಕೀಳಿಸುವ ಶಿಕ್ಷೆಗೆ ಒಳಗಾಗಿ ಪ್ರಾಣಬಿಟ್ಟರು. ಬಸವಣ್ಣನವರು ಮಧ್ಯರಾತ್ರಿ ಕೂಡಲಸಂಗಮಕ್ಕೆ ಹೋಗಿ ಪ್ರಾಣಬಿಟ್ಟರೆಂದು ಹೇಳುತ್ತಾರೆ.

Scanned with CamScanner

## ವಚನಗಳು

1) ಉಳ್ಳವರು ಶಿವಾಲಯವ ಮಾಡುವರು
ನಾನೇನು ಮಾಡುವೆ ಬಡವನಯ್ಯಾ
ಎನ್ನ ಕಾಲೇ ಕಂಬ, ದೇಹವೇ ದೇಗುಲ
ಶಿರ ಹೊನ್ನ ಕಳಶವಯ್ಯಾ
ಕೂಡಲಸಂಗಮದೇವಾ, ಕೇಳಯ್ಯಾ
ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ.

2) ಉಡುವ ಉಣಿಸುವ ಗಂಡನಿದ್ದಂತೆ
ಹೊಡೆ, ಮಿಂಡಗೆ ಕಣ್ಣ ಚೆಲ್ಲುವಳು
ಕೇಳಿಂಗೆ ಬೆರಗಾದೆ ನಾನು
ಕೂಡಲಸಂಗಮದೇವನು
ಸಿಂಗಾರದ ಮೂಗ ಬಿಗ್ಗನಿ, ಹಾಲುಣಿದ್ದಾರೆ ಕೊಂಯ್ಯಾ
ಕೂಡಲಸಂಗಮದೇವಾ.

3) ಎಲ್ಲ ನೋಡಿದರಲ್ಲಿ ಮನಸ್ಸಿಲ್ಲದಿದ್ದೆ
ಶಿಗೆ, ನಿಮ್ಮಾಗೆ, ನಿಮ್ಮ ಪ್ರೇಮದರಾಗೆ
ಪರವಧುವನು ಮಹಾದೇವಿಯೆಂಬೆ
ಕೂಡಲಸಂಗಮದೇವಾ.

ಮುಖ್ಯಸ್ಥರು,
ಕನ್ನಡ ವಿಭಾಗ,
ಎಸ್. ಬಿ. ಕಲಾ ಮತ್ತು ಕೆ. ಸಿ. ಪಿ.
ವಿಜ್ಞಾನ ಮಹಾವಿದ್ಯಾಲಯ, ವಿಜಯಪುರ

IQAC, Co-ordinator
S.B.Arts & K.C.P.Science College,
Vijayapur.

Principal,
S.B. Arts and KCP Science College
VIJAYAPUR

Scanned with CamScanner

ರೇಣುಕಾಸಿದ್ದ. ಪೂಜಾರಿ

ಕ್ರ. ಸಂ. 91

ವರ್ಗ - ಬಿ. ಎ. I st.

[illegible] - ಸಿ[illegible]ಜ್ಞಾನ ವಿ[illegible].

ಮುಖ್ಯಸ್ಥರು,
ಕನ್ನಡ ವಿಭಾಗ,
ಎಸ್. ಬಿ. ಕಲಾ ಮತ್ತು ಕೆ. ಸಿ. ಪಿ.
ವಿಜ್ಞಾನ ಮಹಾವಿದ್ಯಾಲಯ, ವಿಜಾಪುರ

IQAC, Co-ordinator
S.B.Arts & K.C.P.Science College,
Vijayapur.

Principal,
S.B. Arts and KCP Science College
VIJAYAPUR

Scanned with CamScanner

# ಸರ್ವಜ್ಞನ ವಚನಗಳು

ಮುನ್ನ ಪೂರ್ವದಲಾನು । ಪನ್ನಗಧರನಾಳು
ಎನ್ನಯ ಹೆಸರು ಪುಷ್ಪದತ್ತನು - ಎಂದು
ಮನ್ನಿತರು ನಯದಿ ಸರ್ವಜ್ಞ ॥

ಸರ್ವಜ್ಞನಿಗೆ ನಿಜವಾಗಿಯೂ ಪೂರ್ವಜನ್ಮದ ನೆನಪು ಇತ್ತೋ ಅಥವಾ ಅವನ ಕಲ್ಪನೆಯೋ ಅರಿಯದು. ಸರ್ವಜ್ಞ ತನ್ನ ಹಲವು ವಚನಗಳಲ್ಲಿ ತನ್ನ ಪೂರ್ವಜನ್ಮವನ್ನು ಕುರಿತು ಹೇಳಿಕೊಂಡಿರುವನು. ತಾನು ಹಿಂದಿನ ಜನ್ಮದಲ್ಲಿ ಪನ್ನಗಧರ ಅರ್ಥಾತ್ ಸರ್ಪಭೂಷಣ ಶಿವನ ಸೇವಕ ಗಣದಲ್ಲಿದ್ದನು. ಆಗ ತನ್ನ ಹೆಸರು ಪುಷ್ಪದತ್ತ ಎಂದಾಗಿತ್ತು ಎಂದು ತಿಳಿಯಪಡಿಸಿಕೊಂಡಿರುವನು.

ಮಾಸನೂರ ಬಸವರಸ । ಕೊಸನೀಶನ ಬೇಡಲು
ಕಾಶೀಮೀಶನಾಳ್ದು ಕೊಡದ ವರವಿದು - ನಡೆದಾವೆ
ಸ್ವಾಸಿತಂತೆನಲು ಸರ್ವಜ್ಞ

ಮಾಸೂರಿನ ಬಸವರಸ ಮತ್ತು ಆತನ ಹೆಂಡತಿ ಅರ್ಕವಲ್ಲಮ್ಮರಿಗೆ ಸಂತಾನವಿಲ್ಲ. ಬಸವರಸನು ಕಾಶಿಗೆ ತೆರಳಿ ವಿಶ್ವನಾಥನಲ್ಲಿ ಸಂತಾನ ಭಿಕ್ಷೆಯನ್ನು ಬೇಡಿದನು. ಸಾಮಾನ್ಯವಾಗಿ ಮಕ್ಕಳನ್ನು ಬಯಸಿ ಮಾಡುವ ಯಾವುದೇ ಯಾತ್ರೆ, ಹರಕೆ, ಪೂಜೆಯನ್ನಾದರೂ ದಂಪತಿಗಳು ಜೊತೆಯಾಗಿ ಕೈಗೊಳ್ಳುವುದು ಸಂಪ್ರದಾಯ. ಸರ್ವಜ್ಞನ ಮೇಲಿನ ವಚನದಲ್ಲಿ ತನ್ನ ತಂದೆ ಬಸವರಸನೊಬ್ಬನೇ ಕಾಶಿಗೆ ಹೋದನೆಂದು ಹೇಳಲಾಗಿದೆ. ಬಹುಶಃ ದಂಪತಿಗಳಲ್ಲಿ ಸಾಮರಸ್ಯವಿರಲಿಲ್ಲ ಎಂದೆನಿಸುತ್ತದೆ.

ಅಂಬಲೂರೊಳಗೆಸೆವ । ಕುಂಬಾರಮಾಲಯಲಿ
ಇಂಬಿನ ಕೆಳೆಯ ಮಾಳಿಯಾಳು - ಬಸವರಸ
ನಿಂಬಿಟ್ಟುನನ್ನ ಸರ್ವಜ್ಞ ॥

ಕಾಶೀ ವಿಶ್ವನಾಥನಿಂದ ಅನುಗ್ರಹೀತನಾದೆನೆಂಬ ಭರವಸೆಯಿಂದ ಹಿಂತಿರುಗುತ್ತಿದ್ದ ಬಸವರಸನು ದಾರಿಯಲ್ಲಿ ಕುಂಬಾರಗಿತ್ತಿ ಮಾಳಿ ಎಂಬುವಳ ಮನೆಯಲ್ಲಿ ತಂಗಿದ್ದನು. ಅಲ್ಲಿ ಮಾಳಿಯೊಂದಿಗೆ ಬಸವರಸನಿಗೆ ಸಂಬಂಧ ಏರ್ಪಟ್ಟು ಆಕೆ ತಾಯಿಯಾದಳು. ಹುಟ್ಟಿದ ಮಗುವೇ ಸರ್ವಜ್ಞನೆಂದು ಹೇಳಲಾಗುತ್ತದೆ.

IQAC Co-ordinator
S.B.Arts & K.C.P.Science College
Vijayapur.

Principal,
S.B. Arts and KCP Science College
VIJAYAPUR

Scanned with CamScanner

ಕಾಣಲೊಲ್ಲದೆ ತನ್ನ | ಪ್ರಾಣವನು ನೆರೆನಂಬಿ
ಜಾಣತನವನು ತೋರಿದರೆ ಗುರುಮುಖವ |
ಕಾಣದ ಕೋಳ ಸರ್ವಜ್ಞ ||

ವ್ಯಕ್ತಿಗೆ ಆತ್ಮವಿಶ್ವಾಸವಿರಬೇಕು. ಹಾಗೆಂದು ಕೇವಲ ತನ್ನ ಶಕ್ತಿಯೊಂದನ್ನೇ ನಂಬಿಕೊಳ್ಳುವುದು ವಿವೇಕಯುಕ್ತವಾಗಲಾರದು. ತಾನು ಅತಿಬುದ್ಧಿವಂತ. ತನಗೆ ಗುರುವಿನ ಅಗತ್ಯವಿಲ್ಲ. ಸ್ವಶಕ್ತಿಯಿಂದಲೇ ಎಲ್ಲವನ್ನೂ ಕಲಿತು ಬಿಡಬಲ್ಲೆ ಎಂಬ ದುರಹಂಕಾರ ವ್ಯಕ್ತಿಯನ್ನು ಸರ್ವನಾಶದಂಚಿಗೆ ಒಯ್ಯುತ್ತದೆ. ಜ್ಞಾನದ ಹಾದಿಯಲ್ಲಿ ಸತ್ಪಾತ್ರ ಗುರು ಇಲ್ಲದೇ ಸಾಗುವವರು ಗುರಿಮುಟ್ಟಲಾರರು. ಅವರೆಲ್ಲರೂ ಅಮೂಲ್ಯ ಸಂಪತ್ತನ್ನು ಪಡೆಯಲಾರರು. ಜ್ಞಾನದ ಹಾದಿಯಲ್ಲಿ ಕೈಹಿಡಿದು ಕರೆದೊಯ್ಯಲು ಸದ್ಗುರುವೊಬ್ಬ ಬೇಕೇ ಬೇಕು.

ಭೃತ್ಯಾಗಿ ತೊತ್ತಾಗಿ | ಹತ್ತಿಲನ ಗಿಡವಾಗಿ
ಮತ್ತೆ ಪಾದವ | ಕೆರವಾಗಿ
ಗುರುವಿನ ಹತ್ತಿಲಿರು ಸರ್ವಜ್ಞ ||

ಗುರುವಿನ ಸಾಮೀಪ್ಯದಲ್ಲಿರುವಾಗ ಶಿಷ್ಯನಲ್ಲಿ ಕಿಂಚಿತ್ತೂ ಅಹಂ ಉಳಿಯಬಾರದು. ಗುರುವಿನ ಸೇವಕನಾಗಿರಲು ಆತನು ಸಿದ್ಧನಾಗಿರಬೇಕು. ಭೃತ್ಯನಾಗಿಯೋ, ತೊತ್ತಾಗಿಯೋ ಕಡೆಗೆ ಪಾದರಕ್ಷೆಯಾಗಿಯೋ ಗುರುವಿನ ಸನಿಹದಲ್ಲಿದ್ದು ಸಮರ್ಪಣಾ ಭಾವದಿಂದ ಗುರುಸೇವೆ ಮಾಡಿ ವಿದ್ಯಾಸಾಧನೆಯನ್ನು ಮಾಡಬೇಕು. ಅಹಂಕಾರ, ಆಲಸ್ಯ ಎರಡೂ ವಿದ್ಯೆಯ ಪರಮ ಶತ್ರುಗಳು. ಸರ್ವಜ್ಞನ ಈ ವಚನದಲ್ಲಿ ವಿದ್ಯೆ ಕಲಿಯಲು ಬೇಕಾದ ಸಮರ್ಪಣಾಭಾವವನ್ನು ಕಾಣಬಹುದು.

ಆಸನದಿ ದೃಢವಾಗಿ | ವಾಸನೆಯ ತಾ ಕಳೆದು
ಸೂಸುವ ಮನವ | ಬಿಗಿದಿಟ್ಟ ಶಿವಯೋಗಿ |
ಶಾಶ್ವತನಕ್ಕು | ಸರ್ವಜ್ಞ ||

ಆಸನ ಎಂದರೆ ಇಲ್ಲಿ ಕೇವಲ ಪೀಠವಲ್ಲ. ಯೋಗಿಯಾಗಿ ತಾನು ಕಂಡು ಕೊಂಡಿರುವ ನೆಲೆಯಲ್ಲಿ ಆತನು ದೃಢನಾಗಿ ನಿಲ್ಲಬೇಕು. ಶಾರೀರಿಕ ವಾಸನೆಗಳೆಲ್ಲವನ್ನೂ ನೀಗಿಕೊಳ್ಳಬೇಕು. ಶಿವಯೋಗಿಯ ಮನವು ಯಾವ ಆಕರ್ಷಣೆಯಿಂದಲೂ ಬಿಗಿ ತಪ್ಪಬಾರದು. ಅಂಥವನು ಈ ಜಗತ್ತಿನಲ್ಲಿ ಶಾಶ್ವತವಾಗಿ ಹೆಸರನ್ನುಳಿಸಿಕೊಳ್ಳಬಲ್ಲನು.

Scanned with CamScanner

ಜಾತಿ ಜಾತಿಗೆ ವೈರಿ | ನೀತಿ ಮೂರ್ಖಗೆ ವೈರಿ
ಪಾತಕ ವೈರಿ ಸಜ್ಜನಂಗೆ | ಅರಿದವನಿ
ಗೇತರ ವೈರಿ ಸರ್ವಜ್ಞ ||

ಜಾತಿವೈಷಮ್ಯ ಇದ್ದಲ್ಲಿ ಜಾತಿಗೆ ವೈರಿ. ನಮ್ಮ ಜಾತಿ ಹೆಚ್ಚು, ನಿಮ್ಮ ಜಾತಿ ಕಡಿಮೆ ಎಂಬ ಆಕ್ರೋಶವಿರುತ್ತದೆ. ಹಾಗೆಯೇ ಮೂರ್ಖನಿಗ ನೀತಿಬೋಧೆ ರುಚಿಸುವುದಿಲ್ಲ. ಸಜ್ಜನರು ಪಾಪ ಮಾಡಲು ಹೆದರುತ್ತಾರೆ. ಏಕೆಂದರೆ ಅವರ ಆತ್ಮಸಾಕ್ಷಿ ಅದನ್ನು ಒಪ್ಪದು. ಜ್ಞಾನಿಯಾದವನಿಗ ಯಾರಲ್ಲೂ ವೈರವಿಲ್ಲ. ದ್ವೇಷವೂ ಇರುವುದಿಲ್ಲ.

ಜ್ಞಾನದಿಂದಲಿ ಇಹವು | ಜ್ಞಾನದಿಂದಲಿ ಪರವು
ಜ್ಞಾನವಿಲ್ಲದಿರೆ | ಸಕಲವೂ ತನಗಿದ್ದು
ಹಾನಿ ಕಾಣಯ್ಯ ಸರ್ವಜ್ಞ ||

ಜ್ಞಾನದ ಪರಿಧಿಯು ಬಹುವಿಶಾಲವಾದುದು. ವಿದ್ಯೆ, ವಿವೇಕಗಳ ಸಂಗಮವೇ ಜ್ಞಾನ. ಜ್ಞಾನವು ಲೌಕಿಕ ಜಗತ್ತಿನಲ್ಲಿ ಬದುಕುವುದಕ್ಕೆ ಅತ್ಯಗತ್ಯ. ಅಜ್ಞಾನಿಯನ್ನು ಯಾರು ಹೇಗೆ ಬೇಕಾದರೂ ಶೋಷಿಸಬಲ್ಲರು. ಜ್ಞಾನವು ಅಧ್ಯಾತ್ಮದ ಆಳ ಅಗಲಗಳನ್ನು ಅರಿಯಲು, ಭಕ್ತಿಯಲ್ಲಿ ಡೋಂಗಿ ಯಾವುದು, ನೈಜ ಯಾವುದು ಎಂದು ಅರಿಯಲು ಸಹಕಾರಿಯಾಗುತ್ತದೆ. ಇಹ-ಪರಗಳೆರಡಕ್ಕೂ ಲೋಕಜ್ಞಾನ ಮತ್ತು ಪಾರಮಾರ್ಥಿಕ ಜ್ಞಾನಗಳು ಬೇಕು. ಇಲ್ಲವಾದಲ್ಲಿ ವ್ಯಕ್ತಿ ಎಲ್ಲವನ್ನು ಕಳೆದುಕೊಳ್ಳುತ್ತಾನೆ.

ಎತ್ತ ಹೋದರು ಮನವ | ಹತ್ತಿಕೊಂಡೇ ಬರುವ
ಮತ್ತಾಳ್ವ ಮುನಿದು | ಕೊಳ್ಳಲರಿಯ ಜ್ಞಾನವ |
ಬಿತ್ತು ಲೇಸೆಂದ ಸರ್ವಜ್ಞ ||

ಜ್ಞಾನವನ್ನು ಒಂದು ಸಲ ಕಷ್ಟಪಟ್ಟು ನೆನಪಿನ ಭಂಡಾರದಲ್ಲಿ ಸಂಗ್ರಹಿಸಿಟ್ಟರೆ ಮುಗಿಯಿತು. ಅದನ್ನು ಯಾರೊಬ್ಬರೂ ಕದಿಯಲಾರರು. ಹಣ ಕೊಟ್ಟು ಕೊಂಡುಕೊಳ್ಳಲಾರರು. ಅಸೂಯೆಯಿಂದ ನಾಶಪಡಿಸಲಾರರು. ಇನ್ನಷ್ಟು ಮತ್ತಷ್ಟು ಜ್ಞಾನವನ್ನು ವೃದ್ಧಿಸಿಕೊಳ್ಳಬಹುದು.

ಮುಖ್ಯಸ್ಥರು,
ಕನ್ನಡ ವಿಭಾಗ,
ಎಸ್. ಬಿ. ಕಲಾ ಮತ್ತು ಕೆ. ಸಿ. ಪಿ. ವಿಜ್ಞಾನ ಮಹಾವಿದ್ಯಾಲಯ, ವಿಜಾಪುರ

IQAC, Co-ordinator
S.B.Arts & K.C.P.Science College
Vijayapur.

Principal,
S.B. Arts and KCP Science College
VIJAYAPUR

Scanned with CamScanner